## ಪಿಯುಸಿ ಪ್ರಥಮ ವರ್ಷ ಐಚ್ಚಿಕ ಕನ್ನಡ ಪಠ್ಯ ಪರಿಷ್ಕರಣ– ಪಠ್ಯ ಪುಸ್ತಕ ರಚನೆ ï 2013
## ಪಠ್ಯ ಸೂಚಿಯ ವಿವರ

| ಅ.ನಂ | ಉದ್ದಿಷ್ಟ | ಘಟಕ | ಉಪಘಟಕ–ಉಪಶೀರ್ಷಿಕೆ | ಅವಧಿ | ಕಲಿಕೆಯ ಫಲಿತ | ಜ್ಞಾನ ನಿರ್ಧಾರ | ಚಟುವಟಿಕೆ |
|---|---|---|---|---|---|---|---|
| 1 | ಜಾತ್ಯತೀತ ಮನೋಭಾವದ ಬಿತ್ತನೆ,ಕರ್ಮ,ಜ್ಞಾನ ಮಾರ್ಗಗಳ ಪರಿಚಯ ನೀಡುವದು | ವಚನ ಸಾಹಿತ್ಯ | ಆಚಾರವೆ ಕುಲ ಅನಾಚಾರವೇ ಹೊಲೆ –ಮಾದಾರ ಚೆನ್ನಯ್ಯ | 3 | ಸಂವಿಧಾನದ ಜಾತ್ಯತೀತತೆ ಮನದಟ್ಟು ಮಾಡುವದು ಆಧ್ಯಾತ್ಮ ಸಾಧನೆಯ ಭಾರತೀಯ ಮಾರ್ಗಗಳ ತಿಳಿವಳಿಕೆ | ಜ್ಞಾನ ಹಾಗೂ ಗ್ರಹಿಕೆ ಆಧಾರಿತ ಪ್ರಶ್ನೋತ್ತರ. ಪದ್ಯದ ಸ್ವಾರಸ್ಯ ವಿವರಿಸುವ ಅಭಿವ್ಯಕ್ತಿ ಸಾಮರ್ಥ್ಯ ಪರೀಕ್ಷೆ | ವಚನಕಾರರ ವಚನಾಂಕಿತಗಳನ್ನು ಸಂಗ್ರಹಿಸಲು ತಿಳಿಸುವದು.ಕೆಳವರ್ಗದ ವಚನಕಾರರ ಪರಿಚಯ ಮಾಡಿಕೊಳ್ಳುವದು |
| 2 | ಕ್ಷಣಿಕ ಸುಖಗಳ ಆಸೆಗೆ ಬಲಿಯಾಗಬಾರದೆಂಬ ಬೋಧನೆ,ವ್ಯಕ್ತಿ ಸಮಾಜ ಕುಟುಂಬಗಳಲ್ಲಿ ಕಾಯುವ ಕೆಲಸವನ್ನು ಮಾಡುವವವರು ಕೊಲ್ಲುವ ಕಾರ್ಯಕ್ಕೆ ಮುಂದಾಗಬಾರದೆಂಬುದರ ತಿಳಿವಳಿಕೆ ಬಾಹ್ಯಾಡಂಬರಕ್ಕಿಂತ ಭಕ್ತಿ ಮುಖ್ಯ ಎಂಬುದರ ತಿಳುವಳಿಕೆ ನೀಡುವದು | ವಚನ ಸಾಹಿತ್ಯ | ನಾದಪ್ರಿಯ ಶಿವನಲ್ಲ – ಬಸವಣ್ಣ | 4 | ಕ್ಷಣಿಕ ಸುಖದ ಆಸೆಗಾಗಿ ಬದುಕು ನಾಶಗೊಳಿಸಿಕೊಳ್ಳಬಾರದೆಂಬ ಪ್ರಜ್ಞೆಯ ಉದಯ ಕೊಲ್ಲುವದಕ್ಕಿಂತ ಕಾಯುವದು ಶ್ರೇಷ್ಠ ಎಂಬ ತಿಳಿವಳಿಕೆ ಬಾಹ್ಯಾಡಂಬರಕ್ಕಿಂತ ಭಕ್ತಿ ಮುಖ್ಯ ಎಂಬ ಅರಿವು ಮೂಡುವದು | ಗ್ರಹಿಕೆ ಹಾಗೂ ಅಭಿವ್ಯಕ್ತಿ ಆಧಾರಿತ ಪ್ರಶ್ನೋತ್ತರ ವಚನ ವಾಚನ. ವಚನಗಳ ತಾತ್ಪರ್ಯ ಬರೆಯುವಿಕೆ | ವಚನಗಳ ಮಾದರಿಯಲ್ಲಿ ತಮ್ಮ ಅನುಭವಗಳನ್ನು ನಿವೇದಿಸಲು ತೊಡಗಿಸುವುದು ವಚನಗಳ' ಆಶಯಕ್ಕೆ ಹೊಂದಿಕೆಯಾಗುವ ಗಾದೆಮಾತುಗಳನ್ನು ಸಂಗ್ರಹಿಸಿ ವಿಸ್ತರಿಸಲು ಸೂಚಿಸುವದು |
| 3 | ಕಷ್ಟ ಸಹಿಷ್ಣುತೆ ,ಸಾತ್ವಿಕ ಗುಣಗಳ ಉದ್ದೀಪನ,ಭಾವಕೋಶದ ವಿಸ್ತರಣೆ | ವಚನ ಸಾಹಿತ್ಯ | ತನುಕರಗದವರಲ್ಲಿ ï ಅಕ್ಕಮಹಾದೇವಿ | 4 | ಎಡರು ತೊಡರುಗಳನ್ನು ಧೈರ್ಯವಾಗಿ ಎದುರಿಸುವದು. ಕಷ್ಟ ಸಹಿಷ್ಣುತೆ ,ಸಾತ್ವಿಕತೆ | ವಚನದ ಭಾವ ಗ್ರಹಿಕೆ. ಸ್ವಾರಸ್ಯವನ್ನು ಅಭಿವ್ಯಕ್ತಿಗೊಳಿಸುವ ವಿಧಾನದ ಮೂಲಕ ಅಭಿವ್ಯಕ್ತಿ | 12ನೇ ಶತಮಾನದ ಇತರ ವಚನಕಾರ್ತಿಯರ ವಚನಗಳನ್ನು ಸಂಗ್ರಹಿಸಲು |

| | | | | | | | |
|---|---|---|---|---|---|---|---|
| | | | | | ಬೆಳೆಯುವಿಕೆ ,ಮನಸ್ಸಿನ ಕೋಮಲ ಭಾವಗಳನ್ನು ಉದ್ದೀಪಿಸುವದರ ಮೂಲಕ ಯಾಂತ್ರಿಕ ಬದುಕಿನ ಏಕತಾನತೆಯನ್ನು ದೂರ ಗೊಳಿಸುವಿಕೆ | ಸಾಮರ್ಥ್ಯದ ಮೌಲ್ಯಮಾಪನ.ಓದುವ ಬರೆಯುವ ಕೌಶಲಗಳ ಬಳಕೆ | ತಿಳಿಸುವದು. ವಚನ ಗಾಯನ ಸ್ಪರ್ಧೆಗಳನ್ನು ಏರ್ಪಡಿಸುವದು. |
| 4 | ಬದುಕಿನ ಗುರಿ ಮತ್ತು ಅದನ್ನು ಸಾಧಿಸುವ ಮಾರ್ಗಗಳ ಬಗ್ಗೆ ಸ್ಪಷ್ಟ ತಿಳಿವಳಿಕೆ ನೀಡುವದು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೆ ಅಗತ್ಯವಿರುವ ಮೌಲ್ಯಗಳನ್ನು ತಿಳಿಸುವದು.ನಿಸರ್ಗದ ವೀಕ್ಷಣೆ ಹಾಗೂ ತನ್ಮೂಲಕ ಪಾಠ ಕಲಿಯುವದು | ವಚನ | ಕಠಿಣವಾದುದೆಲ್ಲ ಕಷ್ಟಕರವಲ್ಲ<br>– ಸಿದ್ಧಯ್ಯ ಪುರಾಣಿಕ | 3 | ಸಾಧನೆ– ಸಿದ್ಧಿಗಳ ಬಗ್ಗೆ ಅರಿವು ಉಂಟಾಗುವದು.ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗುವ ಅಂಶಗಳ ತಿಳುವಳಿಕೆ ನಿಸರ್ಗದಿಂದಲೂ ಪಾಠ ಕಲಿಯಬಹುದೆಂಬ ಬೋಧೆ | ಜ್ಞಾನ ಕೇಂದ್ರಿತ ಪ್ರಶ್ನೋತ್ತರ,ಗ್ರಹಿಕೆಯಾಧಾರಿತ ಓದುಬರಹದ ಕೌಶಲಗಳ ಮೂಲಕ ಮೌಲ್ಯಮಾಪನ ಮಾಡುವದು | ಆಧುನಿಕ ವಚನಕಾರರ ,ಜೀವನ ಸಾಧನೆಗಳನ್ನು ವೃತ್ತ ಪತ್ರಿಕೆ, ಪುಸ್ತಕಗಳ ಮೂಲಕ ಸಂಗ್ರಹಿಸುವದು.ವಚನಗಳ ' ಧ್ವನಿ ಮುದ್ರಿಕೆಗಳನ್ನು ಆಲಿಸಲು ತಿಳಿಸುವದು. |
| 5 | ಕನ್ನಡ ಸಾಹಿತ್ಯದ ವಿಶಿಷ್ಟ ಪ್ರಕಾರವಾದ ಕೀರ್ತನ ಸಾಹಿತ್ಯವನ್ನು ಪರಿಚಯಿಸುವದು.ಓದಿನ ತಿಳಿವಳಿಕೆ ಆಚರಣೆಯಲ್ಲಿ ಪ್ರಕಟವಾದಾಗ ಮಾತ್ರ ಫಲದಾಯಕ ಎನ್ನುವ ಅರಿವನ್ನು ಮೂಡಿಸುವದು ವೇಷಧಾರಿಯಾಗಿ ಮೋಸ ಮಾಡುವದಕ್ಕಿಂತ ಸದಾಚಾರ ಮೇಲು | ದಾಸ ಸಾಹಿತ್ಯ (ಕೀರ್ತನೆ) | ಏನು ಓದಿದರೇನು ಫಲ<br>ಪುರಂದರದಾಸರು | 3 | ಕಪಟ ಬದುಕಿಗಿಂತ ಸರಳ ಬದುಕು,ನಿರ್ಮಲ ಮನಸ್ಸು ಮುಖ್ಯ ಎಂಬ ಅರಿವು ಮೂಡುವದು, ಬರೀ ಪುಸ್ತಕದ ಓದು ಮುಖ್ಯವಲ್ಲ ಅರಿತುದುದನ್ನು ಆಚರಣೆಯಲ್ಲಿ ತರುವದು ಶ್ರೇಯಸ್ಕರ ಎಂಬುದು ಗೊತ್ತಾಗುವುದು | ರಾಗಬದ್ಧವಾಗಿ ವಾಚನಮಾಡಿಸುವದು.ಗ್ರಹಿಕೆ ಹಾಗೂ ಅಭಿವ್ಯಕ್ತಿ ಸಾಮರ್ಥ್ಯವನ್ನು ಪ್ರಶ್ನೋತ್ತರ ಮತ್ತು ಸೃಜನ ಬರವಣಿಗೆಯ ಮೂಲಕ ನಿರ್ಧರಿಸುವದು | ದಾಸಶ್ರೇಷ್ಠರ ಕೀರ್ತನೆ, ಮುಂಡಿಗೆಗಳ ಸಂಗ್ರಹ ಮಾಡುವದು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನಾಧರಿಸಿ ಕೀರ್ತನೆಗಳನ್ನು ಹಾಡಲು ಪ್ರೇರೇಪಿಸುವದು. |

| | | | | | | | |
|---|---|---|---|---|---|---|---|
| | ಎಂಬ ತಿಳಿವಳಿಕೆ ಮೂಡಿಸುವದು | | | | | | |
| 6 | ಅನಿತ್ಯ ಬದುಕಿಗಿಂತ ಶಾಶ್ವತ ಸತ್ಯದ ಬೆಂಬತ್ತುವದು ಶ್ರೇಯಸ್ಕರ ಎಂಬ ಅರಿವು ಮೂಡಿಸುವದು .ಆದ್ಯಾತ್ಮಿಕ ಮಾರ್ಗದಲ್ಲಿ ಅರಿವಿಗಿಂತ ಸದಾಚಾರ ಸನ್ನಡತೆ ಪ್ರಮುಖ ಪಾತ್ರ ವಹಿಸುತ್ತವೆ ಎಂಬುದನ್ನು ತಿಳಿಯಪಡಿಸುವದು | ದಾಸ ಸಾಹಿತ್ಯ (ಕೀರ್ತನೆ) | ಎರಡು ದಿನದ ಸಂಸಾರ –ಕನಕದಾಸರು | 3 | ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗುವ ಅಂಶಗಳು ಅಳವಡಲು ಪ್ರೇರಣೆ ಒದಗುವದು.ಉನ್ನತ ಮೌಲ್ಯಗಳ ಪರಿಚಯವಾಗುವದು. | 1 ಮತ್ತು 2 ಅಂಕಗಳ ನೇರ ಪ್ರಶ್ನೆಗಳ ಮೂಲಕ ಜ್ಞಾನ ಪರೀಕ್ಷೆ. ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಲು ಕೇಳುವದರ ಮೂಲಕ ಅಭಿವ್ಯಕ್ತಿಯ ಮೌಲ್ಯಮಾಪನ ಮಾಡುವದು. | ಕನಕದಾಸರ ಕುರಿತಾಗಿ ಬಂದಿರುವ ನಾಟಕಗಳನ್ನು ಸಂಗ್ರಹಿಸಿ ಓದುವದು.ಕೀರ್ತನೆಗಳನ ್ನು ಕಥಾರೂಪದಲ್ಲಿ ಹೇಳಲು ,ಬರೆಯಲು ಪ್ರೇರೇಪಿಸುವದು. |
| 7 | ವ್ಯಕ್ತಿಯ ಉನ್ನತಿ ಅವನತಿಗಳಿಗೆ ಮನಸ್ಸೇ ಕಾರಣ ಲೋಕದಾಮಿಷಗಳಿಗೆ ಪಕ್ಕಾಗದಂತೆ ಮನೋನಿಗ್ರಹ ಸಾಧಿಸುವದಕ್ಕೆ ಪ್ರೇರೇಪಿಸುವದು. | ದಾಸ ಸಾಹಿತ್ಯ (ಕೀರ್ತನೆ) | ಯಾಕೆ ಮರುಳಾದೆ ಹೀಗೆ ಎಲೆ ಮನವೆ –ಹೆಳವನ ಕಟ್ಟೆ ಗಿರಿಯಮ್ಮ | 3 | ಮನಸ್ಸಿನ ಚಾಂಚಲ್ಯವನ್ನು ದೂರಗೊಳಿಸಲು ಪ್ರೇರಣೆ, ಲೌಕಿಕ ಸುಖದ ನಶ್ವರತೆಯ ಬಗ್ಗೆ ತಿಳುವಳಿಕೆ ಮೂಡುವದು | ಭಾಷಾಕೌಶಲ ಪರೀಕ್ಷಿಸುವ ಹಿನ್ನೆಲೆಯಲ್ಲಿ ಕೀರ್ತನದ ಓದು,ಸಂದರ್ಭ,ಸ್ವಾರಸ್ಯ ಆಧಾರಿತ ಪ್ರಶ್ನೆಗಳ ಮೂಲಕ ಅಭಿವ್ಯಕ್ತಿ ಸಾಮರ್ಥ್ಯವನ್ನು ಪರೀಕ್ಷಿಸುವದು.ಗ್ರಹಿಕೆಯಾಧಾರಿ ತ ಕಿರು ಪ್ರಶ್ನೆಗಳನ್ನು ಕೇಳುವದು. | ದಾಸ ಸಾಹಿತ್ಯದ ಮಹಿಳಾ ಕವಿಯಿತ್ರಿಯರ ಜೀವನ ಸಾಧನೆಯ ಬಗ್ಗೆ ವಿಚಾರ ಸಂಕಿರಣ ಕೀರ್ತನೆಗಳನ್ನು ರಾಗ ಬದ್ಧವಾಗಿ ಹಾಡುವ ಸ್ಪರ್ಧೆ ಏರ್ಪಡಿಸುವದು.ಗಮಕ ವಾಚನಗಳನ್ನು ಆಲಿಸಲು ತಿಳಿಸುವದು. |
| 8. | ಕನ್ನಡ ಸಾಹಿತ್ಯದ ತಾಯಿ ಬೇರು ಎನಿಸಿರುವ ಜನಪದ ಸಾಹಿತ್ಯದ ಮಹತ್ವವನ್ನು ತಿಳಿಸುವುದು ಕೌಟುಂಬಿಕ ಜೀವನದಲ್ಲಿನ ಪ್ರೀತಿ, ಮನುಷ್ಯ | ಜನಪದ | ತ್ರಿಪದಿ ಚಿಕ್ಯಾಗ' ಚೆಲುವ ಚಂದ್ರಾಮ | 3 | ದೇಸೀ ಛಂದಸ್ಸಿನ ಪ್ರಕಾರವಾದ ತ್ರಿಪದಿಗಳ ಸೊಗಸಿನ ಅರಿವು ತಾಯಿಯ ವಾತ್ಸಲ್ಯ ಭಾವದ ಔನ್ನತ್ಯ, ಭಕ್ತಿ, ಸಂಸ್ಕೃತಿ ಸಂಪ್ರದಾಯಗಳ | ಜ್ಞಾನ ಗ್ರಹಿಕೆ ಕೇಂದ್ರಿತ ಪ್ರಶ್ನೆಗಳನ್ನು ಕೇಳುವುದು ಓದು ಬರಹದ ಕೌಶಲ್ಯ ಹೆಚ್ಚಿಸುವ ಪ್ರಶ್ನೆಗಳನ್ನು ಕೇಳುವುದು. | 1. ತ್ರಿಪದಿ ಸಾಹಿತ್ಯ ಸಂಗ್ರಹ. ಹಾಡುಗಬ್ಬಕ್ಕೆ ಸೂಕ್ತವೆನಿಸಿರುವ ತ್ರಿಪದಿಗಳನ್ನು ಗಾಯನಕ್ಕೆ ಅಳವಡಿಸಿ ಅಭ್ಯಾಸ ಮಾಡುವುದು. |

| | | | | | | | |
|---|---|---|---|---|---|---|---|
| 9.<br><br>10. | ಸಂಬಂಧಗಳ ವಿವಿಧರೂಪಗಳು ಹೆಣ್ಣಿನ ಬದುಕಿಗೆ ಕೈಗನ್ನಡಿ ಆಗುವ ದರ್ಶನ ಮಾಡಿಸುವುದು ಪ್ರಕೃತಿ ಸ್ವರೂಪದ ಪರಿಚಯ ಮೂಡಿಸುವುದು.<br><br>ಮಳೆ–ಬೆಳೆ–ರೈತನ ಅವಿನಾಭಾವ ಸಂಬಂಧ ತಿಳಿಸುವುದು<br><br>ಜನ ಸಾಮಾನ್ಯರ ಬದುಕಿನ ರೀತಿ – ನೀತಿಗಳ ಬೋಧನೆ ನೈತಿಕ ಮಾರ್ಗದರ್ಶನ | ತತ್ತ್ವಪದ | ಗೀತೆ<br>ಬಣ್ಣದ ಗುಬ್ಯಾರು<br>ಮಳೆರಾಜ<br><br>ಶ್ರೀಗುರುವಚನೋಪದೇಶ<br>ನಿಜಗುಣ ಶಿವಯೋಗಿ | 3<br><br>3 | ಅರಿವು<br><br>ಬರಗಾಲದ ಭೀಕರತೆ, ಅತಿವೃಷ್ಟಿಯ ಅನಾಹುತ ರೈತರ ಬದುಕಿನಲ್ಲಿ ಮಳೆಯೆಂಬುದರ ಮಹತ್ವ<br><br>ಗುರುವಿನ ಮಹಿಮೆ ನೀತಿಬದ್ಧ ಜೀವನದ ಅಗತ್ಯವನ್ನು ತಿಳಿಸುವುದು ಆತ್ಮ ಸ್ಥೈರ್ಯ, ಧರ್ಮ ನಿಷ್ಠೆ ತನ್ನತಾನರಿಯುವ ಆತ್ಮಶೋಧನೆಯ ಅಗತ್ಯವೆಂಬ ಅರಿವು | ಪದ್ಯಗಳ ಕಂಠಪಾಠ ಮಾಡಿಸುವ ಮೂಲಕ ಸ್ಮರಣ ಶಕ್ತಿ ವರ್ಧನೆ<br>ನೇರ ಪ್ರಶ್ನೆಗಳನ್ನು ಕೇಳುವುದು<br>ನೇಗಿಲಯೋಗಿಯ ಬದುಕು ï ಬವಣೆಯ ಗ್ರಹಿಕೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು.<br><br>ಗ್ರಹಿಕಾ ಸಾಮರ್ಥ್ಯ ಹೆಚ್ಚಿಸುವ ಪ್ರಶ್ನೆ ಕೇಳುವುದು. ನೈತಿಕತೆಯ ಮೌಲ್ಯವನ್ನು ಅಭಿವ್ಯಕ್ತಿಸುವ ಪ್ರಶ್ನೆಗಳನ್ನು ಕೇಳುವುದು. | ಬರಗಾಲದ, ಅತಿವೃಷ್ಟಿಯ ಅನಾಹುತಗಳ ಕುರಿತು ಪ್ರಬಂಧ ರಚನೆ<br><br>1. ಭಜನಾ ಪದಗಳ ಸಂಗ್ರಹ ಮಾಡಿ ತತ್ತ್ವಪದಗಳನ್ನು ಗುರುತಿಸುವುದು<br>2. ಕೆಲವು ತತ್ತ್ವಪದಗಳ ಸಂಗ್ರಹಣೆ |
| 11. | ಹತ್ತೊಂಬತ್ತನೆಯ ಶತಮಾನದ ಹೊತ್ತಿಗೆ ಕನ್ನಡ ಕಾವ್ಯಾಭಿವ್ಯಕ್ತಿಯ ಪಡೆದುಕೊಂಡ ಹೊಸತನದ ಪರಿಚಯ ನವೋದಯ, ನವ್ಯ, | | ಮಾವಿನ ಗೊಲ್ಲೆ<br>ಮಧುರ ಚೆನ್ನ | 3 | ಭಗವಂತನ ಸೃಷ್ಟಿಯಲ್ಲಿ ಕಂಡುಬರುವ ವೈವಿಧ್ಯ, ಆದರೂ ಸಕಲ ಜೀವರಾಶಿಗಳಲ್ಲಿ ಭಗವಂತನ ಸ್ವರೂಪವನ್ನು ಕಾಣುವುದು | ನೇರವಾದ ಪ್ರಶ್ನೆಗಳ ಮೂಲಕ ಜ್ಞಾನದ ವೃದ್ಧಿ ಸೃಷ್ಟಿ ವೈವಿಧ್ಯದ ಕುರಿತು ಅಭಿವ್ಯಕ್ತಿ ಪಡಿಸುವ ಸಾಮರ್ಥವನ್ನು ಬೆಳೆಸುವ ಪ್ರಶ್ನೆಗಳನ್ನು ಕೇಳುವುದು. ಭಾವಾರ್ಥ ಬರೆಯಲು | ಕನ್ನಡದ ಅನುಭಾವಿ ಕವಿಗಳನ್ನು ಗುರುತಿಸುವುದು ಪಂಚೇಂದ್ರಿಯಗಳ ಮೂಲಕ ದೊರೆಯುವ ಜ್ಞಾನಕ್ಕೂ |

| | | | | | | | |
|---|---|---|---|---|---|---|---|
| | ಪ್ರಗತಿಶೀಲ, ಬಂಡಾಯ ಪ್ರಕಾರಗಳ ಪರಿಚಯ. ಸಾಹಿತ್ಯ ಸಮಾಜದ ಪ್ರತಿಬಿಂಬವೆನ್ನುವದನ್ನು ಸ್ಪಷ್ಟವಾಗಿಸಲು ಕನ್ನಡ ಕವಿಗಳ ಕಂಡುಕೊಂಡ ಸಾಹಿತ್ಯದ ವಿವಿಧ ಸ್ವರೂಪಗಳನ್ನು ತಿಳಿಸುವುದು. | | | | ಅಂತರಂಗದಲ್ಲಿ ಮೂಡುವ ಜ್ಞಾನದ ಫಲವೆಂಬ ಸತ್ಯವನ್ನು ತಿಳಿಸುವುದು ನವೋದಯ ಸಾಹಿತ್ಯದ ಪ್ರಧಾನ ಅಂಶವಾದ ಸರ್ವಜೀವ ಪ್ರೀತಿಯದರ್ಶನ ಅನುಭಾವಿ ಎಂಬುದರ ಅರ್ಥಗ್ರಹಣೆ | ಕೇಳುವುದು. | ಇಂದ್ರಿಯಾತೀತ ಜ್ಞಾನಕ್ಕೂ ಇರುವ ವ್ಯತ್ಯಾಸವನ್ನು ದೃಷ್ಟಾಂತ ಕಥೆಗಳನ್ನು ಓದಿ ಗ್ರಹಿಸುವ ಮೂಲಕ ತಿಳಿಸುವುದು. ವಿಚಾರ ವಿನಿಮಯ ಚರ್ಚೆಯ ಮೂಲಕ ಮಾಡಿಸುವುದು |
| 12. | ಪ್ರಕೃತಿ ï ಮನುಷ್ಯ ಸಂಬಂಧ ಎಂದಿನಿಂದಲೂ ಇರುವಂತಹುದು ಪ್ರಕೃತಿಯ ಆರಾಧನೆ ಪರಮನ ಆರಾಧನೆ ಎನ್ನುತ್ತಲೇ ಮನುಷ್ಯ ಅದನ್ನು ನಾಶ ಪಡಿಸಲು ಮುಂದಾಗಿದ್ದಾನೆ. ಆದರೆ ಈ ಪರಸ್ಪರ ಸಂಬಂಧ ಅವಿನಾಭಾವವಾಗಿರುವುದರ ' ಮೇಲೆ ಇಂದಿನ ಮತ್ತು ನಾಳಿನ ಜೀವ ಜಗತ್ತಿನ ಉಳಿಯುವಿಕೆಯೆಂಬ ಸತ್ಯದರ್ಶನ | ಹೊಸಗನ್ನಡ ' ಕಾವ್ಯ | ಶ್ರಾವಣ ದ.ರಾ.ಬೇಂದ್ರೆ | 4 | ಪ್ರಕೃತಿ ಕೇವಲ ಜಡವಲ್ಲ. ಅದು ಚೇತನ ಸ್ವರೂಪಿ ನೆಲ ಮುಗಿಲುಗಳ ಚೈತನ್ಯ ಸ್ವರೂಪ ವಿಶ್ವಕುಟುಂಬಿಯಾಗಿರುತ್ತದೆ. ಮನುಷ್ಯನು ಸ್ವಾರ್ಥಿಯಾಗಿರಬಾರದೆನ್ನುವ ' ಅರಿವು | ಜ್ಞಾನ ಕೇಂದ್ರೀಕೃತವಾಗುವ ನೇರ ಪ್ರಶ್ನೆಗಳು ಶ್ರಾವಣದ ಮುಖ್ಯ ಲಕ್ಷಣವಾದ ಮಳೆಯ ಜೀವಾಧಾರವೆಂಬುದನ್ನು ಅಭಿವ್ಯಕ್ತಿಸುವ ಪ್ರಶ್ನೆಗಳು ಭಾಷಾ ಕೌಶಲ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳು | ಮಳೆಯ ಬಗೆಗಿನ ಇತರ ಕವಿಗಳ ಕವಿತೆಗಳ ಸಂಗ್ರಹಣೆ ಮಳೆಯ ಸೌಂದರ್ಯ ಮತ್ತು ಭೀಕರತೆಗೆ ಸಂಬಂಧಿಸಿದಂತೆ ಪ್ರಬಂಧ ರಚನೆ ಬೇಂದ್ರೆಯವರ ಶಬ್ದ ಪ್ರೌಢಿಮೆಯ ಕುರಿತು ವಿವರಿಸಿ ಲೇಖನ ಬರೆಸುವುದು |
| 13. | ಅನ್ನದಾತನಾದ ರೈತನ ಬವಣೆಯ ಪರಿಚಯ ರೈತನ ಸಮಸ್ಯೆಗಳಿಗೆ | ಹೊಸಗನ್ನಡ ' ಕಾವ್ಯ | ರೈತನ ದೃಷ್ಟಿ ಕುವೆಂಪು | 4 | ದೇಶದ ಬೆನ್ನೆಲುಬಾದ ರೈತನ ಶ್ರಮವನ್ನು ನಿರ್ಲಕ್ಷಸತಕ್ಕದ್ದಲ್ಲ | ಗ್ರಹಿಕಾ ಸಾಮರ್ಥಕ್ಕೆ ಅನುವು ನೀಡುವ ವಿವರಣಾತ್ಮಕ ಉತ್ತರ ಬಯಸುವ ಪ್ರಶ್ನೆಗಳು ನೇರ | ರೈತರ ಬಗ್ಗೆ ಪ್ರಕಟವಾಗಿರುವ ಇತರೇ ಕನ್ನಡ ಕವಿತೆಗಳ |

| | | | | | | | |
|---|---|---|---|---|---|---|---|
| | ಅನಾದಿಕಾಲದಿಂದಲೂ ಪರಿಹಾರ ನೀಡದ ಶೋಷಕ ಸಮಾಜದತ್ತ ಗಮನ ಸೆಳೆಯುವುದು ದುಡಿದ ವರ್ಗಕ್ಕೆ ಋಣಿಯಾಗಿರುವ ಅಗತ್ಯ ತಿಳಿಸುವುದು. | | | | ದುಡಿವವರ್ಗದ ಶ್ರಮಕ್ಕೆ ತಕ್ಕ ಫಲ ದೊರಕಬೇಕೆಂದಬ ಆದರ್ಶ ಗುಣದ ಅರಿವು ರೈತನ ಅಸಹಾಯಕತೆಯ ಕುರಿತು ಮಾನವೀಯ ಅನುಕಂಪದ ಅರಿವು | ಪ್ರಶ್ನೆಗಳು ವಿಮರ್ಶಾತ್ಮಕ ಜ್ಞಾನ ಮೂಡಿಸುವ ಪ್ರಶ್ನೆಗಳು | ಅಭ್ಯಾಸ. ಬೇಂದ್ರೆಯವರು ಬರೆದಿರುವ “ಭೂಮಿ ತಾಯಿಯ ಚೊಚ್ಚಲ ಮಗ” ಕವಿತೆಯನ್ನು ಓದಿ ಗ್ರಹಿಸಲು ತಿಳಿಸುವುದು. |
| 14. | ಮನುಷ್ಯ ಸದಾಕಾಲ ಜೀವನ್ಮುಖಿಯಾಗಿರಬೇಕೆಂಬ ಅಂಶದ ಅರಿವು ಸಂಕೀರ್ಣ ಬದುಕಿನ ನಾನಾ ಮುಖಗಳ ಪರಿಚಯ ಆತ್ಮ ವಿಶ್ವಾಸದ ಅಗತ್ಯ | ಹೊಸಗನ್ನಡ ´ ಕಾವ್ಯ | ಎಲ್ಲರೊಳಗೊಂದಾಗು ಡಿ. ವಿ. ಗುಂಡಪ್ಪ | 4 | ಸಾಂಘಿಕ ಜೀವನದ ಮಹತ್ವ ತಿಳಿಯಲು ಸಾಹಿತ್ಯದ ಜ್ಞಾನದ ಅವಶ್ಯಕವೆಂಬ ಅರಿವು ವ್ಯಕ್ತಿತ್ವವನ್ನು ಉತ್ತಮವಾಗಿ ರೂಪಿಸಿಕೊಳ್ಳುವ ಕಲೆಯ ಮನವರಿಕೆ | ಜ್ಞಾನಾರ್ಜನೆಯಲ್ಲಿ ನೆರವಾಗುವ ಶಬ್ದಭಂಡಾರದ ವಿವಿಧ ಸ್ವರೂಪಗಳನ್ನು ವ್ಯಾಕರಣದಡಿಯಲ್ಲಿ ಪ್ರಶ್ನಿಸುವುದು. ನೇರ ಉತ್ತರದ ಪ್ರಶ್ನೆಗಳು. ಸಾರ್ಥಕ, ಯಶಸ್ವಿ ಬದುಕಿನ ದಾರಿಯನ್ನು ಕುರಿತು ಪ್ರಶ್ನೆಗಳು. | ಡಿ. ವಿ. ಜಿ. ಯವರ “ಮಂಕುತಿಮ್ಮನ ಕಗ್ಗ” ವನ್ನು ಆಧರಿಸಿ ವ್ಯಕ್ತಿತ್ವ ವಿಕಸನದ ಕುರಿತು ಪ್ರಬಂಧ ರಚನೆ. ಜೀವನದಲ್ಲಿ ಕಂಡ, ಕೇಳಿದ ವಿಶೇಷ ವಿಚಾರಗಳನ್ನು ಚೌಪದಿ ರೂಪದಲ್ಲಿ ಬರೆಯಲು ಪ್ರೇರೇಪಿಸುವುದು. |
| 15. | ಸರಳ ಭಾಷೆಯಲ್ಲಿ ಸಂಭಾಷಣೆಯ ರೂಪದಲ್ಲಿನ ಪದ್ಯ ರಚನೆಯ ಸೌಂದರ್ಯ ತಾಯಿ ಮಗಳ ಬಾಂಧವ್ಯದಲ್ಲಿ ಕಾಣುವ ಕಕ್ಕುಲಾತಿ ಕೌಟುಂಬಿಕ ಜೀವನದ ಮಧುರ ಚಿತ್ರದ ಪರಿಚಯ | ಹೊಸಗನ್ನಡ ´ ಕಾವ್ಯ | ರೈಲ್ವೇ ನಿಲ್ದಾಣದಲ್ಲಿ ಕೆ.ಎಸ್.ನರಸಿಂಹಸ್ವಾಮಿ | 4 | ಪ್ರೀತಿ, ವಾತ್ಸಲ್ಯಯಗಳಂತೆಯೇ ಕರ್ತವ್ಯ ಶ್ರದ್ಧೆಯ ಅಗತ್ಯವೆಂಬುದರ ಅರಿವು ಸಂಬಂಧಗಳು ಸಡಿಲಿವಾಗುತ್ತಿರುವ ಪ್ರಸ್ತುತ ಕಾಲದಲ್ಲಿ ಅಂತಃಕರಣದ ಮಹತ್ವವನ್ನು ಮತ್ತೆ ಗುರುತಿಸುವುದು. | ಮನುಷ್ಯ ಸಂಬಂಧಗಳನ್ನು ನೆನಪಿಸುವ, ಗುರುತಿಸುವ ಅಭಿವ್ಯಕ್ತಿಗೆ ಅಗತ್ಯವಾದ ಪ್ರಶ್ನೆಗಳು ಗ್ರಹಣ ಸಾಮರ್ಥ್ಯ ಹೆಚ್ಚಿಸುವ ವಿಶ್ಲೇಷಣಾತ್ಮಕ ಪ್ರಶ್ನೆಗಳು ಪದ್ಯದ ಸಾರಾಂಶ ಬರೆಸುವುದು. | “ತೊಟ್ಟೋಲ ಹೊತ್ಕೊಂಡು ಜಾನಪದ ತ್ರಿಪದಿಯನ್ನು ಇದರೊಂದಿಗೆ ಹೋಲಿಸುವುದು ರೈಲ್ವೇ ನಿಲ್ದಾಣದಲ್ಲಿ ಕಂಡುಬರುವ ಸಾಮಾಜಿಕ ಜೀವನದ ವಿವಿಧ ಚಿತ್ರಣಗಳನ್ನು ಗುರುತಿಸಿ |

| | | | | | | | |
|---|---|---|---|---|---|---|---|
| | | | | | | | ಬರೆಯುವುದು. ಇಲ್ಲಿರುವ ಅನ್ಯ ದೇಶ್ಯ ಶಬ್ದಗಳನ್ನು ಪಟ್ಟಿ ಮಾಡುವುದು |
| 16. | ಮನಸ್ಸಿದ್ದರೆ ಏನಾದರೂ ಸಾಧಿಸಬಹುದೆಂಬ ಅರಿವು ಮೂಡಿಸುವುದು. | ಹೊಸಗನ್ನಡ ' ಕಾವ್ಯ | ಗಜಲ್ ಶಾಂತರಸ | | ಮನುಷ್ಯ ಪ್ರಯತ್ನಕ್ಕೆ ಮೀರಿದ್ದು ಯಾವುದೂ ಇಲ್ಲವೆಂಬ' ಭರವಸೆ ಧೈರ್ಯ, ಸಂಸ್ಕಾರ ಶ್ರದ್ಧೆ, ಪ್ರಾಮಾಣಿಕತೆ ಇದ್ದರೆ ಅಸಾಧ್ಯವೆಂಬುದು ಯಾವುದೂ ಇರುವುದಿಲ್ಲವೆಂಬುದರಲ್ಲಿ ವಿಶ್ವಾಸ | ವ್ಯಾಕರಣಾಂಶಗಳನ್ನು ಕುರಿತ ಪ್ರಶ್ನೆಗಳು. ಕನ್ನಡದ್ದೇ ಆದ ಇತರ ಛಂದಸ್ಸಿನ ಪ್ರಕಾರಗಳನ್ನು ಕುರಿತ ಪ್ರಶ್ನೆಗಳು. ಜ್ಞಾನಕೇಂದ್ರಿತವಾದ ನೇರ ಪ್ರಶ್ನೆಗಳು ಭಾವಾರ್ಥ ವಿವರಿಸಲು ಪ್ರಶ್ನೆ | ಇದೇ ಅರ್ಥ ಬರುವ ಕೆಲವು ಶಿವಶರಣರ ವಚನಗಳನ್ನು ಗಮನಿಸುವುದು. ಗಜಲ್ ಪ್ರಕಾರವನ್ನು ಹಾಡಿಗೆ ಅಳವಡಿಸಿ ಪ್ರಯೋಗ ಮಾಡುವುದು. |
| 17. | ಆಡಂಬರದ ಮಾತು ಬೂಟಾಟಿಕೆಯ ನಡೆ ನುಡಿ ಅಧಿಕಾರದ ಆಮಿಷ, ಮೋಸ ವಂಚನೆಗಳಿಗೆ ಒಳಗಾದರೆ ಅಂತಹ ಸ್ವಾರ್ಥ ಸಾಧಕರಿಂದ ಸುಂದರ ದೇಶದ ನಿರ್ಮಾಣ ಬರಿಯ ಕನಸಿನ ಮಾತಾಗುತ್ತದೆಂಬ ಅರಿವು ಮೂಡಿಸುವುದು. | ಹೊಸಗನ್ನಡ ' ಕಾವ್ಯ | ಇಲ್ಲಿ ಭಾರತ ಬರಿಯ ಕನಸಿನಲ್ಲಿ – ಸಿದ್ದಲಿಂಗ ಪಟ್ಟಣಶೆಟ್ಟಿ | 4 | ಸುಭದ್ರ ದೇಶದ ನಿರ್ಮಾಣದಲ್ಲಿ ಪ್ರತಿಯೊಬ್ಬ ಪ್ರಜೆಯೂ ಸಂಕಲ್ಪ ಬದ್ಧರಾಗಬೇಕು. ಎದುರಾಗುವ ಅಡ್ಡಿ ಆತಂಕ ನಿವಾರಿಸಿ ಧೈರ್ಯದಿಂದ ಮುನ್ನುಗ್ಗುವ ಪ್ರಯತ್ನದಲ್ಲಿ ತೊಡಗಬೇಕು. ಪ್ರಾಮಾಣಿಕರಾಗಬೇಕು ಸುಂದರ ಭಾರತದ ಶಿಲ್ಪಿಗಳಾಗಬೇಕು | ದೇಶವನ್ನು ಸುಭದ್ರವಾಗಿಸುವ ನಿಟ್ಟಿನಲ್ಲಿ ಗುಂಪು ಚರ್ಚೆಗಳು ವಿಚಾರ ಸಂಕಿರಣಗಳು ನಡೆಸುವುದು. ಗ್ರಹಿಕೆ ಅಳವಡುವ ಪಠ್ಯದ ವಿಷಯಗಳ ಕುರಿತು ನೇರಪ್ರಶ್ನೆಗಳು | ಗೋಪಾಲಕೃಷ್ಣ ಅಡಿಗರ "ಕಟ್ಟುವೆವು ನಾವು" ಕವಿತೆಯನ್ನು ಓದಿ ಕೆಲವು ಗಾದೆ ಮಾತುಗಳನ್ನು ಸಂಗ್ರಹಿಸುವುದು. ನಾಡಿನ ನವನಿರ್ಮಾಣದ ಕುರಿತು ಸ್ವಂತವಾಗಿ ಸರಳ ಕವಿತೆಯನ್ನು ರಚಿಸುವುದು. |

| | | | | | | |
|---|---|---|---|---|---|---|
| 18. | ಸಮಾಜದಲ್ಲಿ ತುಳಿತಕ್ಕೆ ಒಳಗಾದ ಜನತೆಯ ಸ್ಥಿತಿಗತಿಗಳ ಅರಿವು ಮೂಡಿಸುವುದು ಶ್ರಮಿಕ ವರ್ಗದವರಿಗೆ ನಾವು ಸದಾ ಋಣಿಯಾಗಿರಬೇಕೆಂಬ ತಿಳಿವು ಮೂಡಿಸುವುದು ಸಮಾಜದಲ್ಲಿ ದಲಿತರ ಬಗ್ಗೆ ಮಾನವೀಯ ಅನುಕಂಪ ಮೂಡಿಸುವುದು | ಹೊಸಗನ್ನಡ ' ಕಾವ್ಯ | ನನ್ನ ಚಪ್ಪಲಿಗಳಿಗೆ<br>ಸತೀಶ್ ಕುಲಕರ್ಣಿ | 4 | ನಮಗೆ ರಕ್ಷಣೆ ಕೊಡುವ ವಸ್ತುವಿಗೆ, ಅನ್ನ ನೀಡುವ ಶ್ರಮಿಕ ವರ್ಗದವರಿಗೆ ಕೃತಜ್ಞರಾಗಿರಬೇಕೆಂಬ ಅರಿವು. ಮಾನವೀಯ ಮೌಲ್ಯಗಳ ಕಲಿಕೆ | ಪೌರಾಣಿಕ ಕಥೆಯಲ್ಲಿ ಬರುವ ಅಂಶಗಳ ಬಗೆಗೆ ಪುನರ್ ಮನನ ಮೂಡಿಸುವ ಪ್ರಶ್ನೆಗಳು. ಅಭಿವ್ಯಕ್ತಿ ಕೇಂದ್ರಿತ ಪ್ರಶ್ನೆಗಳು ಜ್ಞಾನಾಧಾರಿತ ನೇರ, ಸರಳ ಉತ್ತರ ಬಯಸುವ ಪ್ರಶ್ನೆಗಳು ಸಾಂದರ್ಭಿಕ ಸ್ವಾರಸ್ಯದ ಪ್ರಶ್ನೆಗಳು | ಡಾ॥ ಜಿ. ಎಸ್. ಶಿವರುದ್ರಪ್ಪನವರ ಕಸಪೊರಕೆ ಕವಿತೆಯನ್ನು ಗಮನಿಸಿ, ಚಪ್ಪಲಿಗಳ ಸಾಂಕೇತಿಕತೆಯ ರೀತಿಯಲ್ಲಿ ಇನ್ನಿತರ ಕೆಳವರ್ಗದವರ ಬದುಕಿನ ಸಮಸ್ಯೆಗಳನ್ನು ಕುರಿತು ಚರ್ಚೆ ಮಾಡುವುದು. |
| 19. | ಸಾಹಿತ್ಯದಲ್ಲಿ ಮಹಿಳೆಯರ ಕೊಡುಗೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯನ್ನು ನಿರ್ಲಕ್ಷಿಸಿರುವುದು. | ಹೊಸಗನ್ನಡ '<br>ಕಾವ್ಯ | ಅವಳ ಚರಿತ್ರೆ<br>ಕೆ. ಶರೀಫಾ | 4 | ಸ್ತ್ರೀಶಕ್ತಿಯ ಅಗಾಧತೆಯ ಅರಿವು. ಜಗತ್ತಿನ ಸಂಸ್ಕೃತಿಗೆ ಮಹಿಳೆ ನೀಡಿರುವ ಮಹತ್ವದ ಕೊಡುಗೆಯ ಪರಿಚಯ. | ಜಗತ್ತಿನ ನಾಗರೀಕತೆಗಳ ಸಂಕ್ಷಿಪ್ತ ಪರಿಚಯಕ್ಕೆ ಸಂಬಂಧಿಸಿದ ಪ್ರಶ್ನೆಗಳು ಹೆಣ್ಣಿನ ಸ್ಥಾನಮಾನದ ಕುರಿತು ಜಾಗೃತಿ ಮೂಡಿಸುವ ಪ್ರಶ್ನೆಗಳು | ಸ್ತ್ರೀಶೋಷಣೆಯ ವಿವಿಧ ಮುಖಗಳು ಮತ್ತು ಸ್ತ್ರೀ ಸ್ವಾತಂತ್ರ್ಯದ ಕುರಿತು ಪ್ರಬಂಧ ರಚನೆ, ವಿಚಾರ ಸಂಕಿರಣ |
| 20. | ದಲಿತರ ಮತ್ತು ಬಡವರ ಶೋಚನೀಯ ಬದುಕಿನ ಚಿತ್ರಣವನ್ನು ಸುಳಿಯುವ ಮಳೆಗೆ ಹೋಲಿಸಿರುವ ಹಾಗೂ ಆ ಮೂಲಕ ಪ್ರಕೃತಿ ಮತ್ತು ಕೆಳ ವರ್ಗದವರ ನಡುವಿನ | ಹೊಸಗನ್ನಡ ' ಕಾವ್ಯ | ಕಾಗದದ ದೋಣಿಯಲ್ಲಿ ಸುಬ್ಬು ಹೊಲೆಯಾರ್ | 4 | ದೀನ ದಲಿತರ ಬದುಕಿನ ನೋವಿನ ಚಿತ್ರಣ ಸಾಂಕೇತಿಕವಾಗಿದ್ದು ಕಾಗದದ ದೋಣಿಯಂತೆ ಅವರ ಬದುಕು ಅಸ್ಥಿರವೆಂಬ ಸತ್ಯವನ್ನು ಅರಿಯುವುದು | ಪ್ರಕೃತಿ ವಿಕೋಪದಲ್ಲಿ ಬಲಿಪಶುಗಳಾಗುವ ಹಲವು ಅಂಶಗಳಂತೆ ಶೋಷಣೆಗೆ ಒಳಗಾಗುವ ಜನರ ಬವಣೆ ಅಭಿವ್ಯಕ್ತಿಸಿ ವಿವರಣಾತ್ಮಕ ಉತ್ತರ ಬಯಸುವ ಪ್ರಶ್ನೆಗಳು. ಭಾಷಾ ಕೌಶಲ ಹೆಚ್ಚಿಸುವ ವ್ಯಾಕರಣಾಂಶದ ಪ್ರಶ್ನೆಗಳು | ಮಳೆಯಲ್ಲಿ ತೋಯ್ದ ಅನುಭವವನ್ನು ಕಥಾ ರೂಪದಲ್ಲಿ ಬರೆಯುವುದು ಮಳೆ ಕುರಿತು ಕವಿತಾ ರಚನೆ |
| 21. | ಹಳೆಗನ್ನಡದ ಶೈಲಿ ವಾಕ್ಯ ರಚನೆ, ವಿಭಕ್ತಿ ಪ್ರತ್ಯಯ ಪರಿಚಯಿಸುವುದು. | ಗದ್ಯ ಭಾಗ | ನಾಲ್ವರ್ ಧೂರ್ತರ್ ಓರ್ವ ಬ್ರಾಹ್ಮಣನಂ ವಂಚಿಸಿದ ಕಥೆ– | 4 | ಹಳೆಗನ್ನಡದ ಪರಿಚಯ, ವಿಗ್ರಹ ವಾಕ್ಯ, ಕನ್ನಡದ ಪ್ರಥಮ ಗದ್ಯಗ್ರಂಥದ | ತತ್ಸಮ ತದ್ಭವ, ವಾಕ್ಯ ರಚನೆ, ಹಳೆಗನ್ನಡದ ಸಂಭಾಷಣೆಯನ್ನು | ಕಥಾ ರೂಪವನ್ನು ನಾಟಕೀಕರಣಗೊಳಿಸಿ ಹೊಸ ಮಾರ್ಗದಲ್ಲಿ |

| | | | | | | | |
|---|---|---|---|---|---|---|---|
| | ಸುಳ್ಳನ್ನು ಸತ್ಯವೆಂದು ನಂಬಿಸುವ ಧೂರ್ತರಿಂದ ಎಚ್ಚರಿಕೆ ವಹಿಸುವ ಅರಿವನ್ನು ಬೆಳೆಸುವುದು. | | ದುರ್ಗಸಿಂಹ | | ಅರಿವು, ಸುಳ್ಳನ್ನು ಸತ್ಯವೆಂದು ನಂಬಿಸುವುದು ನಂಬಿಸುವ ಆಧುನಿಕ ಮಾಧ್ಯಮಗಳ ಬಗ್ಗೆ ಎಚ್ಚರ ಮೂಡಿಸುವುದು. | ಮೌಖಿಕವಾಗಿ ಒಪ್ಪಿಸುವ ಕೌಶಲ್ಯ ಬೆಳೆಸುವುದು, ವಾಕ್ಯವನ್ನು ವಿಗ್ರಹಿಸಿ ಓದುವ ಕೌಶಲ್ಯ ಮತ್ತು ಅಭಿವ್ಯಕ್ತಿ ಸಾಮರ್ಥ್ಯವನ್ನು ಪ್ರಧಾನವಾಗಿಸಿ ಪ್ರಶ್ನೆಗಳನ್ನು ರೂಪಿಸುವುದು. | ತಿಳಿಸುವುದು |
| 22. | ಪ್ರವಾಸ ಕಥನಗಳ ಪರಿಚಯ, ಪರದೇಶದಲ್ಲಿ ಪರಂಪರೆಗೆ ಸ್ಪಂದಿಸುವ ಗೌರವವನ್ನು ತಿಳಿಸುವುದು. ವಿದೇಶಿ ವಾಸ್ತು ಶೈಲಿ ಕಲಾಪರಂಪರೆಯನ್ನು ತಿಳಿಸುವ ಮೂಲಕ ನಮ್ಮ ಕಲೆ, ಸಂಸ್ಕೃತಿಯನ್ನು ರಕ್ಷಿಸಬೇಕಾದ ಅಗತ್ಯವನ್ನು ಮನವರಿಕೆ ಮಾಡಿಕೊಡುವುದು. | ಗದ್ಯ ಭಾಗ | ರೋಮ್ ನಗರದಲ್ಲಿ ಡಾ॥ ಕೆ. ಶಿವರಾಮಕಾರಂತ | 5 | ಪ್ರಾಚ್ಯ ಕಲೆ ಸಂಸ್ಕೃತಿ, ವಾಸ್ತು ಶಿಲ್ಪದ ಪರಿಚಯ ತೌಲನಿಕವಾಗಿ ಭಾರತೀಯ ಸಂಸ್ಕೃತಿಯ ರಕ್ಷಣೆಗೆ ಪ್ರೇರೇಪಣೆ ಉಂಟು ಮಾಡುವುದು. | ಏಟಿಡಿತಿಟಜಜಱ ಚಿಟಿಜ ಗಟಿಜಜಹಿಣಚಿಟಿಜುಟಿ ಜ್ಞಾನ ಹಾಗೂ ಅರ್ಥಗ್ರಹಣದ ಅನ್ವಯ ಪ್ರಶ್ನೆಯನ್ನು ರೂಪಿಸುವುದು | 1.ಭಾರತೀಯ ಶಿಲ್ಪ ಚಿತ್ರಕಲೆಗಳ ಚಿತ್ರಣಗಳನ್ನು ಸಂಗ್ರಹಿಸಲು ತಿಳಿಸುವುದು<br><br>2. ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಪ್ರವಾಸ ಏರ್ಪಡಿಸುವುದು |
| 23. | ವಿದ್ಯಾರ್ಥಿಗಳಿಗೆ ಮನಃಶಾಸ್ತ್ರವನ್ನು ಪರಿಚಯಿಸುವುದು ಮಾನಸಿಕ ಒತ್ತಡ ಅದು ಉಂಟು ಮಾಡುವ ಭ್ರಮೆಗಳ ಬಗ್ಗೆ ತಿಳಿಸಿ ವೈಚಾರಿಕ ಪ್ರಜ್ಞೆ ಬೆಳೆಸುವುದು. ವೈಜ್ಞಾನಿಕ ಲೇಖನಗಳನ್ನು ಪರಿಚಯಿಸುವುದು. | ಗದ್ಯ ಭಾಗ | ಮೈಮೇಲೆ ದೇವರು. ದೆವ್ವ ಬರುವುದು ಡಾ॥ ಸಿ. ಆರ್. ಚಂದ್ರಶೇಖರ (ಮನೋವೈಜ್ಞಾನಿಕ ಲೇಖನ) | 5 | ಮನೋವಿಕಾರಗಳ ಅರಿವು, ವೈಚಾರಿಕ ಪ್ರಜ್ಞೆಯ ಜಾಗೃತಿ, ಪ್ರತಿಯೊಂದು ವಿಷಯವನ್ನು ವಿಶ್ಲೇಷಿಸಿ ನೋಡುವ ಸಾಮರ್ಥ್ಯದ ಬೆಳವಣಿಗೆ ಅನುಭವಗಳನ್ನು ಅಭಿವ್ಯಕ್ತಿಗೊಳಿಸುವ ಕೌಶಲ್ಯದ ಪರಿಚಯ | ಜ್ಞಾನ ಹಾಗೂ ಅರ್ಥಗ್ರಹಣ ಪ್ರಧಾನ (ಏಟಿಡಿತಿಟಜಜಱ ಚಿಟಿಜ ಗಟಿಜಜಹಿಣಚಿಟಿಜುಟಿ) ಜ್ಞಾನ ನಿರ್ಧಾರದ ಮಾನಸಿಕವಾಗಿಸಿದ ಪ್ರಶ್ನೆಗಳನ್ನು ರೂಪಿಸುವುದು ವಿವರವಾದ ಉತ್ತರಗಳಲ್ಲಿ ಮೇಲಿನ ಅಂಶಗಳಿಗೆ ಪ್ರಾಧಾನ್ಯ ನೀಡುವುದು. ಅಭಿವ್ಯಕ್ತಿಗೊಳಿಸುವುದು. | ಅನುಭವ ನಿರೂಪಣೆ ಕನ್ನಡದಲ್ಲಿ ಇದುವರೆಗೂ ಬಂದ ಪ್ರಮುಖ ಆತ್ಮಕಥೆಗಳನ್ನ ಪರಿಚಯಿಸುವುದು.<br>ಉದಾ ï ಕುವೆಂಪು, ಕಾರಂತ್, ಗಿರೀಶ್ ಕಾರ್ನಾಡ, ಮಲ್ಲಿಕಾರ್ಜುನ ಮನ್ಸೂರ |

| | | | | | | | |
|---|---|---|---|---|---|---|---|
| | ಕಲಿಕೆಯಲ್ಲಿ ನಿಷ್ಠೆ ಬೆಳೆಸುವುದು. ಆತ್ಮ ಚರಿತ್ರೆ ಪ್ರಕಾರವನ್ನು ಪರಿಚಯಿಸುವುದು | | | | | | |
| 24. | ಆತ್ಮ ಚರಿತ್ರೆಯ ಪ್ರಕಾರವನ್ನು ಪರಿಚಯಿಸುವುದು | ಗದ್ಯ ಭಾಗ | ದಾರಿ ಯಾವುದಯ್ಯ ಕಾಲೇಜಿಗೆ ಡಾ॥ ಸ.ಜ. ನಾಗಲೋಟಿ ಮಠ | 6 | ವ್ಯಕ್ತಿತ್ವದಲ್ಲಿ ಆತ್ಮ ವಿಶ್ವಾಸದ ಅಗತ್ಯ ಮತ್ತು ಮಹತ್ವ | ನೇರ ಪ್ರಶ್ನೆಗಳು ಸಾಂದರ್ಬಿಕ ವಿವರಣೆ ಬಯಸುವ ವಾಕ್ಯಗಳ ಮೂಲಕ ಮೌಲ್ಯಮಾಪನ | ಆತ್ಮ ಚರಿತ್ರೆಯ ಇತರ ಗ್ರಂಥಗಳನ್ನು ಓದುವುದು ದಿನಚರಿ ಬರೆಯುವ ಅಭ್ಯಾಸವನ್ನು ಬೆಳೆಸುವುದು. |
| 25. | ನಾಗರೀಕತೆ ಹಾಗೂ ನಮ್ಮ ದೇಶೀ ಸಂಸ್ಕೃತಿಯ ಮುಖಾಮುಖಿಯಿಂದಾಗುವ ' ದ್ವಂದ್ವಗಳನ್ನು ಪರಿಚಯಿಸುವುದು. ಗ್ರಾಮೀಣ ನಂಬಿಕೆಗಳನ್ನು ಹೊಸ ತಿಳಿವಿನ ಬೆಳಕಿನಲ್ಲಿ ವಿವೇಚಿಸುವುದು. ಸಣ್ಣ ಕಥಾ ಪ್ರಕಾರವನ್ನು ಪರಿಚಯಿಸುವುದು | ಗದ್ಯ ಭಾಗ | ಕುಬುಸ ಕುಂ. ವೀರಭದ್ರಪ್ಪ | 7 | ಗ್ರಾಮೀಣ ಸಂಸ್ಕೃತಿಯ ಕೆಳವರ್ಗದ ಜನ ಸಮುದಾಯದ ನಂಬಿಕೆ–ಆಚರಣೆಗಳ ಪರಿಚಯ – ಪರಂಪರೆ ಆಧುನಿಕತೆಗಳ ಮುಖಾಮುಖಿಯಿಂದಾಗುವ ತಲ್ಲಣಗಳ ಬಗ್ಗೆ ತಿಳಿವಳಿಕೆ | ಆಡು ಮಾತನ್ನು ಗ್ರಾಂಥಿಕ ರೂಪದಲ್ಲಿ ಬಳಸುವ ರೂಪದಲ್ಲಿ ತೋರುವ ಕೌಶಲ್ಯವನ್ನು ಪರೀಕ್ಷಿಸುವುದು ಆಡು ಮಾತಿನ ವಿವಿಧ ಛಾಯೆಗಳನ್ನು ಗ್ರಹಿಸುವ ನಿಟ್ಟಿನಲ್ಲಿ ಪ್ರಶ್ನೆಗಳನ್ನು ರೂಪಿಸುವುದು. | ತಮ್ಮ ಪರಿಸರದ ಆಚರಣೆ–ನಂಬಿಕೆಗಳ ಬಗ್ಗೆ ಪರಿಸರ ಚರ್ಚೆ ಸಂಬಂಧಿಸಿದ ಭಾವಚಿತ್ರಗಳು ಸಂಗ್ರಹಣೆಗೆ ಪ್ರೇರೇಪಿಸುವುದು |
| 26. | ಅಸಹಾಯಕ ಪರಿಸ್ಥಿತಿಯ ಮಹಿಳೆ ಸಾಮರ್ಥ್ಯದಿಂದ ಲೋಕೋಪಕಾರಿಯಾಗಿ ಬೆಳೆಯುವ ಬಗೆಯನ್ನು ತಿಳಿಸುವುದು. * ಬದುಕು ತಂದೊಡ್ಡುವ ಸಂಕಷ್ಟಗಳನ್ನು ಧೈರ್ಯವಾಗಿ ಎದುರಿಸುವ ಕ್ರಿಯಾಶೀಲವಾಗಿ | ಗದ್ಯ ಭಾಗ | ನಂಜನ ಗೂಡಿನ ತಿರುಮಲಾಂಭ ಡಾ॥ ವಿಜಯಾ ದಬ್ಬೆ | 6 | ಕನ್ನಡದ ಮೊದಲ ಪ್ರಕಾಶಕಿ ಲೇಖಕಿ, ಪತ್ರಿಕಾ ಸಂಪಾದಕಿ ಪರಿಚಯ ಸಂಕಷ್ಟ ಪರಿಸ್ಥಿತಿ ಎದುರಿಸಿ ಛಲದಿಂದ ಬದುಕನ್ನು ಕಟ್ಟಿಕೊಳ್ಳುವ ವಿಧಾನದ ಪರಿಚಯ ಮಾದರಿ ವ್ಯಕ್ತಿಗಳು ಹೇಗಿರಬೇಕು ಎಂಬುದರ ಬಗ್ಗೆ ಅರಿವು | ಅಭಿವ್ಯಕ್ತಿ ಸಾಮರ್ಥ್ಯದ ಹಿನ್ನೆಲೆಯಲ್ಲಿ ಪ್ರಬಂಧ ರಚನೆ ಜ್ಞಾನವನ್ನು ಪರೀಕ್ಷಿಸಲು ಒಂದು ಹಾಗೂ ಎರಡು ಅಂಶಗಳ ಪ್ರಶ್ನೆಗಳನ್ನು ನೀಡುವುದು ಪಾಠವನ್ನು ಹೇಗೆ ಗ್ರಹಿಸುತ್ತಾರೆ ಎಂಬುದಕ್ಕೆ ಸಂಬಂಧಿಸಿದಂತೆ ವಿಭಾಗದ ವಿವರಗಳನ್ನ ಪಡೆಯುವುದು. | * ಆದರ್ಶ ವ್ಯಕ್ತಿಗಳ ಜೀವನ ಚರಿತ್ರೆಗಳನ್ನು ಸಂಗ್ರಹಿಸುವುದು *ಭಾವಚಿತ್ರಗಳನ್ನು ಸಂಗ್ರಹಿಸುವುದು * ಸಾಕ್ಷ್ಯಚಿತ್ರಗಳನ್ನು ನೋಡಿ ವಿಶ್ಲೇಶಿಸುವುದು. |

| | | | | | | | |
|---|---|---|---|---|---|---|---|
| | ರೂಪುಗೊಳಿಸುವ ಮಾದರಿ ವ್ಯಕ್ತಿತ್ವವನ್ನು ಪರಿಚಯಿಸುವುದು | | | | ಮೂಡಿಸುವುದು | | |
| 27. | ಸಣ್ಣ ವಿವರಗಳೂ ಸಾಹಿತ್ಯ ರಚನೆಗೆ ವಸ್ತುವಾಗಬಲ್ಲದು ಎಂಬುದನ್ನು ತಿಳಿಸುವುದು ಬರವಣಿಗೆಯಲ್ಲಿ ಸಾಹಿತ್ಯವನ್ನು ತರುವ ಬಗೆಯನ್ನು ಪರಿಚಯಿಸುವುದು. ಅನುಭವ ನವಿರಾದ ನಿರೂಪಣೆ ತರುವುದು | ಗದ್ಯ ಭಾಗ | ದೋಸೆ<br>ï ವೈದೇಹಿ ಲಲಿತ ಪ್ರಬಂಧ | 6 | ಜೀವನದ ಪ್ರೀತಿ ಬದುಕಿನಲ್ಲಿ ಬೆಳೆಸುವುದು. ಸದಭಿರುಚಿಯ ವ್ಯಕ್ತಿತ್ವ | ಬರೆಯುವ ಪ್ರಾದೇಶಿಕ ಭಾಷೆಯನ್ನು ವಿಶಿಷ್ಟವಾಗಿ ಓದುವ ಕೌಶಲ್ಯ ಸಂಬಂಧಿಸಿದಂತೆ ಜ್ಞಾನ ನಿರ್ಧರಿಸುವುದು. ಪ್ರಾದೇಶಿಕ ನುಡಿಗಳ ಬಳಕೆ ವಾಕ್ಯ ರಚನೆ ಮಾಡುವುದು. | ತಮ್ಮ ಅನುಭವಗಳನ್ನು ಲಿಖಿತವಾಗಿ ನಿರೂಪಿಸಲು ತಿಳಿಸುವುದು ಗೊರೂರು ರಾಮಸ್ವಾಮಿ ಅಯ್ಯಂಗಾರ್ ವಿ. ಸೀ. ಮುಂತಾದವರ ಲಲಿತ ಪ್ರಬಂಧಗಳ ಮೂಲಕ ಪ್ರಯತ್ನ ಮಾಡಲು ತಿಳಿಸುವುದು |
| 28. | ಕನ್ನಡ ಭಾಷೆಯ ಪ್ರಾಚೀನತೆ, ಬೆಳವಣಿಗೆ<br><br>ಸಾಹಿತ್ಯರೂಪದ ಪ್ರಾರಂಭ ಬೆಳವಣಿಗೆ ಪ್ರಯೋಜನ ಕುರಿತು ತಿಳಿಸುವುದು | ಆಧುನಿಕ ಕನ್ನಡ ಕಾವ್ಯ<br><br>ಭಾಷೆ, ಸಾಹಿತ್ಯ | ಕನ್ನಡ ಭಾಷೆ ಸಾಹಿತ್ಯದ ಅರ್ಥ ವಿವರಣೆ<br><br>ಸ್ವರೂಪ ವ್ಯಾಪ್ತಿ ಪ್ರಯೋಜನ | 12 | ನಾಡು ನುಡಿಯಾದ ಕನ್ನಡ ಭಾಷೆಯ ಇತಿಹಾಸದ ಅರಿವು<br><br>ಬದುಕಿನಲ್ಲಿ ಸಾಹಿತ್ಯದ ಹಿರಿಮೆ ಗರಿಮೆಗಳನ್ನು ಕುರಿತ ಅರಿವು, ಸಾಹಿತ್ಯದ ಪ್ರಯೋಜನದ ಬೋಧೆ. | ಜ್ಞಾನ ಕೇಂದ್ರಿತ ಪ್ರಶ್ನೆಗಳು ಭಾಷಾ ಸೌಂದರ್ಯದ ಅರಿವು ಮೂಡಿಸುವ<br><br>ತನ್ಮೂಲಕ ಭಾಷಾ ಸಂಪತ್ತಿನ ವೃದ್ಧಿಗೆ ನೆರವಾಗುವ ಪ್ರಶ್ನೆಗಳು. | 1. ಉತ್ತಮ ಪುಸ್ತಕಗಳನ್ನು ಹೆಸರಿಸಿ ಓದುವ ಹವ್ಯಾಸ ಬೆಳೆಸುವುದು<br><br>2. ಓದಿದ ಪುಸ್ತಕಗಳ ಕುರಿತು ಗುಂಪು ಚರ್ಚೆ ಏರ್ಪಡಿಸುವುದು. |